ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-1

**ಸಂಖ್ಯೆ: ಸಿ1(7)ಗ್ರೂಪ್ ಬಿ ಸೇ ಮಾ 1 /2018-19** **ದಿನಾಂಕ:1-6-2018**

**ಜ್ಞಾಪನಾ**

**ವಿಷಯ:** ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ಗ್ರೂಪ್ - ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿ ಸಲ್ಲಿಸುವ ಬಗ್ಗೆ

**ಉಲ್ಲೇಖ:** ದಿನಾಂಕ 30/5/2018 ರಂದು ಅಪರ ನಿರ್ದೇಶಕರು(ಆಡಳಿತ) ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸೂಚನೆಯಂತೆ

-&&&&-

ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ಗ್ರೂಪ್ - ಬಿ ವೃಂದದ ಎಲ್ಲಾ ಅಧಿಕಾರಿಗಳಿಂದ ಸೇವಾ ಮಾಹಿತಿಯನ್ನು ವಯಕ್ತಿಕ ಡೋಸಿಯರ್‌ನಲ್ಲಿ ಪಡೆದು ಪ್ರತಿ ಅಧಿಕಾರಿಗಳಿಗೆ ಪ್ರತ್ಯೇಕ ಕಡತ ನಿರ್ವಹಣೆ ಮಾಡಲು ಉಲ್ಲೇಖಿತ ಸಭೆಯಲ್ಲಿ ತೀರ್ಮಾನಿಸಲಾಗಿದೆ ಅದರಂತೆ ಪ್ರಾಯೋಗಿಕವಾಗಿ ಬೆಂಗಳೂರ ದಕ್ಷಿಣ ಜಿಲ್ಲೆ, ಬೆಂಗಳೂರ ಉತ್ತರ ಜಿಲ್ಲೆ ಬೆಂಗಳೂರ ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ, ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ಈ 06 ಜಿಲ್ಲೆಗಳ ಗ್ರೂಪ್ ಬಿ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ಸಭೆಯನ್ನು ಕರೆಯಲಾಗಿದೆ ಎಲ್ಲಾ ಅಧಿಕಾರಿಗಳು ಈ ಪತ್ರದೊಂದಿಗೆ ಲಗತ್ತಿಸಿರುವ ಚೆಕ್ ಲಿಸ್ಟ್‌ನಲ್ಲಿ ಮಾಹಿತಿ ಸಿದ್ದಪಡಿಸಿಕೊಂಡು ಲಗತ್ತುಗಳೊಂದಿಗೆ ಡೋಸಿಯರ್ಸ್ ಸಿದ್ದಪಡಿಸಿಕೊಂಡು ದಿನಾಂಕ 13/6/2018ರಂದು ಬೆಳಗ್ಗೆ 10:00 ಗಂಟೆಗೆ ಶಿಕ್ಷಕರ ಸದನ ಕಾವೇರಿ ಭವನದ ಎದುರು ಬೆಂಗಳೂರು ಇಲ್ಲಿನ ಸಭಾಂಗಣಕ್ಕೆ ಹಾಜರಾಗುವಂತೆ ತಿಳಿಸಿದೆ.

[ಎಂ.ಟಿ.ರೇಜು]

ಆಯುಕ್ತರು

2/6/18

2/6/18

**ಇವರಿಗೆ,**

1] ಉಪನಿರ್ದೇಶಕರು[ಆಡಳಿತ], ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರ ದಕ್ಷಿಣ ಜಿಲ್ಲೆ, ಬೆಂಗಳೂರ ಉತ್ತರ ಜಿಲ್ಲೆ ಬೆಂಗಳೂರ ಗ್ರಾಮಾಂತರ ಜಿಲ್ಲೆ, ರಾಮನಗರ ಜಿಲ್ಲೆ, ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆ, ಇವರಿಗೆ ಕಳುಹಿಸುತ್ತಾ ಜಿಲ್ಲೆಯಲ್ಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳನ್ನು ಚೆಕ್ ಲಿಸ್ಟ್ ಪ್ರಕಾರ ಮಾಹಿತಿ /ದಾಖಲೆಗಳನ್ನು ದಿನಾಂಕ 13/6/2018 ರಂದು ಬೆಳಗ್ಗೆ 10:00 ಗಂಟೆಗೆ ಶಿಕ್ಷಕರ ಸದನ ಬೆಂಗಳೂರು ಇಲ್ಲಿ ನಡೆಯುವ ಸಭೆಗೆ ಖುದ್ದು ಹಾಜರಾಗಿ ಮುದ್ದಾಂ ಸಲ್ಲಿಸುವಂತೆ ತಿಳಿಸಿದೆ.

2] ಉಪನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ ಕಛೇರಿ, ಶಿಕ್ಷಕರ ಸದನ,ಕಾವೇರಿ ಭವನದ ಎದುರು ಬೆಂಗಳೂರು ಇವರಿಗೆ ಕಳುಹಿಸುತ್ತಾ ದಿನಾಂಕ 13/6/2018 ರಂದು ಸಭಾಂಗಣವನ್ನು ಕಾಯ್ದಿರಿಸಲು ಕೋರಿದೆ.

3] ಪ್ರತಿಯನ್ನು ಮಾಹಿತಿಗಾಗಿ ಸೂಕ್ತ ಕ್ರಮಕ್ಕಾಗಿ, ಬೆಂಗಳೂರ ದಕ್ಷಿಣ, ಬೆಂಗಳೂರ ಉತ್ತರ, ಬೆಂಗಳೂರ ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಳುಹಿಸಿದೆ.

## ಸರ್ಕಾರಿ ಪ್ರೌಢ ಶಾಲಾ ಮುಖ್ಯ ಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಅಧಿಕಾರಿಗಳ ಸೇವಾ ಮಾಹಿತಿ

| ಕ್ರ.ಸಂ | ವಿವರ | ಮಾಹಿತಿ | ದಾಖಲೆ ಲಗತ್ತಿಸಿರುವ ಬಗ್ಗೆ ಚೆಕ್ ಲಿಸ್ಟ್ |
|---|---|---|---|
| 1 | ಪ್ರಥಮ ಕೆ.ಜಿ.ಐ.ಡಿ ಸಂಖ್ಯೆ(ಪಾಲಿಸಿ ಬಾಂಡ್ ಜೆರಾಕ್ಸ್ ಪ್ರತಿಯೊಂದಿಗೆ) | | |
| 2 | ಅಧಿಕಾರಿಯ ಹೆಸರು, ಹುದ್ದೆ ಮತ್ತು ಕಛೇರಿ ವಿಳಾಸ | | |
| 3 | ಜನ್ಮ ದಿನಾಂಕ ಹಾಗೂ ಜಾತಿ ಎಸ್ಸಿ/ಎಸ್ಟಿ/ಇತರೆ ಮಾಹಿತಿ ದಾಖಲೆಯೊಂದಿಗೆ | | |
| 4 | ಗ್ರೂಪ್-ಬಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕ | | |
| 5 | ನೇರ ನೇಮಕಾತಿ ಮೂಲಕ ಗ್ರೂಪ್ ಬಿ ಹುದ್ದೆಗೆ ಬಂದಿದ್ದಲ್ಲಿ ಆದೇಶದ ಪ್ರತಿ | | |
| 6 | ಬಡ್ತಿ ಮೂಲಕ ಗ್ರೂಪ್-ಬಿ ಹುದ್ದೆಗೆ ಬಂದಿದ್ದಲ್ಲಿ ವಿವರ & ಆದೇಶದ ಪ್ರತಿ - ಕೆ ಪಿ ಎಸ್ಸ್ ಸಿ ಜೇಷ್ಠತಾ ಸಂಖ್ಯೆ | ನಿ-32ರಡಿ ಬಡ್ತಿ ದಿನಾಂಕ :<br>ಸ್ಥಾನಪನ್ನ ಬಡ್ತಿ ದಿನಾಂಕ : | |
| 7 | ಖಾಯಂ ಪೂರ್ವ ಸೇವಾವಧಿ ಘೋಷಣೆ ಆಗಿರುವ ಆದೇಶ ಸಂಖ್ಯೆ & ದಿನಾಂಕ (ಪ್ರತಿ ಲಗತ್ತಿಸುವುದು) | | |
| 8 | ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರ (03) | | |
| 9 | ಕಾಲ ಮಿತಿ / ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರಾಗಿದ್ದಲ್ಲಿ ಆದೇಶದ ಸಂಖ್ಯೆ (ಪ್ರತಿ ಲಗತ್ತಿಸುವುದು) | | |
| 10 | ಇಲಾಖಾ ಪರೀಕ್ಷೆ ಉತ್ತೀರ್ಣರಾಗಿರುವ ಬಗ್ಗೆ ಮಾಹಿತಿ (ಪ್ರತಿಗಳನ್ನು ಲಗತ್ತಿಸುವುದು) | | |
| 11 | ಹಿಂದಿನ 5 ವರ್ಷಗಳ ಕಾರ್ಯ ನಿರ್ವಹಣಾ ವರದಿಗಳು (ಮೂಲ ಪ್ರತಿಗಳನ್ನು ಲಗತ್ತಿಸುವುದು) | | |
| 12 | ಗ್ರೂಪ್-ಬಿ ಹುದ್ದೆಗೆ ಬಂದಾಗಿನಿಂದ ಇಲ್ಲಿಯವರೆಗಿನ ಆಸ್ತಿ:ಋಣ ಪಟ್ಟಿ ಸಲ್ಲಿಸಲಾಗಿದೆಯೇ (ಪ್ರತಿಗಳನ್ನು ಲಗತ್ತಿಸುವುದು) | | |
| 13 | ಸ್ವಂತ ಜಿಲ್ಲೆ/ತಾಲ್ಲೂಕು/ಸ್ಥಳ | | |
| 14 | ಉನ್ನತ ಶಿಕ್ಷಣ ಹೊಂದಿದ್ದಲ್ಲಿ ಮಾಹಿತಿ (ಪ್ರತಿ ಲಗತ್ತಿಸುವುದು) | | |
| 15 | ಗಣಕ ಯಂತ್ರ ತರಬೇತಿ ಹೊಂದಿರುವಿರೇ (ಹೊಂದಿದ್ದಲ್ಲಿ ದಾಖಲೆ ಲಗತ್ತಿಸುವುದು) | | |
| 16 | ನಾಮಿನಿ ದಾಖಲಿಸಿರುವ ಬಗ್ಗೆ ಮಾಹಿತಿ/ದಾಖಲೆ ಲಗತ್ತಿಸುವುದು | | |
| 17 | ಶಿಸ್ತು ಕ್ರಮ / ಇಲಾಖಾ ವಿಚಾರಣೆ ಬಾಕಿ ಇರುವ/ಇಲ್ಲದಿರುವ ಬಗ್ಗೆ ಸ್ಪಷ್ಟವಾದ ಮಾಹಿತಿ | | |
| 18 | ಗ್ರೂಪ್-ಬಿ ವೃಂದದಲ್ಲಿ ಸೇವೆ ಸಲ್ಲಿಸಿರುವ ವಿವಿಧ ಕಛೇರಿ ಮತ್ತು ಹುದ್ದೆಗಳ ಪದನಾಮ | ಇಂದ | ವರೆಗೆ |
| | | | |
| | | | |
| | | | |